# ಮುಲಕನಾಡು ಮಹಾ ಸಂಘ (ರಿ)

(ನೋಂದಣಿ ಸಂಖ್ಯೆ: ರಿ. ನಂ. 756:1995-1996)

512, 47ನೇ ಕ್ರಾಸ್, 5ನೇ ಬ್ಲಾಕ್, ಜಯನಗರ, ಬೆಂಗಳೂರು - 560 041
ವೆಬ್‌ಸೈಟ್: mulakanadusangha.com

---

## 13ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಆಹ್ವಾನ ಪತ್ರಿಕೆ

ಸನ್ಮಾನ್ಯ ಸದಸ್ಯರೇ,

ಮುಲಕನಾಡು ಮಹಾ ಸಂಘದ 13ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಶ್ರೀ ಬಿ. ಎಲ್. ನಾಗೇಂದ್ರ ಪ್ರಸಾದ್‌ರವರ ಅಧ್ಯಕ್ಷತೆಯಲ್ಲಿ ದಿನಾಂಕ 06-09-2015ನೇ ಭಾನುವಾರ ಮಧ್ಯಾಹ್ನ 12-00 ಘಂಟೆಗೆ ಸರಿಯಾಗಿ ಈ ಕೆಳಕಂಡ ವಿಷಯಗಳನ್ನು ಪರಿಶೀಲಿಸಿ ಅಂಗೀಕರಿಸಲು ಕರೆಯಲಾಗಿದೆ. ತಾವುಗಳು ಸಕಾಲಕ್ಕೆ ದಯಮಾಡಿಸಬೇಕಾಗಿ ಪ್ರಾರ್ಥನೆ.

**ಸ್ಥಳ: ಗೀರ್ವಾಣ ವಿದ್ಯಾಭವನ**

ನಂ. 1835/ಎ, 9ನೇ ಮುಖ್ಯರಸ್ತೆ, 34ನೇ ಕ್ರಾಸ್, 9ನೇ ಮುಖ್ಯರಸ್ತೆ, ಬಿ.ಎಸ್.ಕೆ. 2ನೇ ಹಂತ, ಬೆಂಗಳೂರು 70

## ವಿಷಯ ಸೂಚಿ

1. ಪ್ರಾರ್ಥನೆ.
2. ಸ್ವಾಗತ ಮತ್ತು ಅಧ್ಯಕ್ಷರ ಭಾಷಣ.
3. ಅಗಲಿದ ಸದಸ್ಯರುಗಳಿಗೆ ಸಂತಾಪ ಸೂಚನೆ.
4. 2014-2015ನೇ ಸಾಲಿನ ಸರ್ವ ಸದಸ್ಯರ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು.
5. ದಿನಾಂಕ 21-09-2014 ರಂದು ನಡೆದ 12ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡುವುದು.
6. 2014-15 ನೇ ಸಾಲಿನ ಕಾರ್ಯಕಾರಿ ಮಂಡಳಿಯ ವರದಿಯನ್ನು ಮಂಡಿಸುವುದು.
7. 2014-2015ನೇ ಸಾಲಿನ ಆಡಿಟ್ ಆದ ಲೆಕ್ಕ ಪತ್ರಗಳ ಆಡಿಟ್ ವರದಿಯ ಪರಿಶೀಲನೆ ಮತ್ತು ಅಂಗೀಕಾರ.
8. 2015-2016ನೇ ಸಾಲಿನ ಆಯ-ವ್ಯಯ ಅಂದಾಜು ಪಟ್ಟಿಯ ಮಂಡನೆ.
9. ಲೆಕ್ಕ ಪರಿಶೋಧಕರ ನೇಮಕ ಮತ್ತು 2015-16ನೇ ವರ್ಷದ ಸಂಭಾವನೆಯನ್ನು ನಿಗದಿಪಡಿಸುವುದು.
10. ಸಕಾಲಕ್ಕೆ ತಲುಪಿದ ಸದಸ್ಯರ ಸಲಹೆಗಳನನು ಮಂಡಿಸಲಾಗುವುದು.
11. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೇ ವಿಷಯಗಳು.
12. ಕಾರ್ಯಕಾರಿ ಸಮಿತಿಗೆ 15 ಸ್ಥಾನಕ್ಕೆ ಚುನಾವಣೆ ಮತ್ತು ಫಲಿತಾಂಶ ಘೋಷಣೆ
13. ವಂದನಾರ್ಪಣೆ.

ಕಾರ್ಯಕಾರಿ ಮಂಡಳಿಯ ಆದೇಶದ ಮೇರೆಗೆ

ದಿನಾಂಕ: 08-08-2015

**ಬಿ. ಆರ್. ರವಿ**
ಕಾರ್ಯದರ್ಶಿ

**ಸನ್ಮಾನ, ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿ ವೇತನ ವಿತರಣಾ ಸಮಾರಂಭ**
**ದಿನಾಂಕ 06-09-2015ನೇ ಭಾನುವಾರದಂದು ಬೆಳಗ್ಗೆ 9.00 ಘಂಟೆಗೆ**
**ಸ್ಥಳ: ಗೀರ್ವಾಣ ವಿದ್ಯಾಭವನ**

## ಸೂಚನೆ

1. ಸರ್ವ ಸದಸ್ಯರು ದಯವಿಟ್ಟು ಹಾಜರಿ ರಿಜಿಸ್ಟರಿನಲ್ಲಿ ಸಹಿಯನ್ನು ನಮೂದಿಸಬೇಕಾಗಿ ವಿನಂತಿ ಹಾಗೂ ವಿಳಾಸದ ಬದಲಾವಣೆ ಇದ್ದಲ್ಲಿ ತಿಳಿಸಿ.
2. ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳ ಪುಸ್ತಕಗಳನ್ನು 24.8.2015 ನಂತರ ಗೀರ್ವಾಣ ವಿದ್ಯಾಭವನ, ನಂ. 1835/ಎ, 9ನೇ ಮುಖ್ಯರಸ್ತೆ, 34ನೇ ಕ್ರಾಸ್, ಬಿ.ಎಸ್.ಕೆ. 2ನೇ ಹಂತ, ಬೆಂಗಳೂರು-560 070 ರವರ ಕಚೇರಿಯಲ್ಲಿ ಬೆಳಗ್ಗೆ 9-30 ರಿಂದ11-00 ಘಂಟೆಯವರೆಗೂ ಹಾಗೂ ಸಾಯಂಕಾಲ 4-30 ರಿಂದ 6-00 ಘಂಟೆಯವರೆಗೆ ಪರಿಶೀಲಿಸಬಹುದು ಹಾಗ ಪ್ರತಿಗಳನ್ನು ಸರ್ವ ಸದಸ್ಯರ ಸಭೆಯಲ್ಲಿ ಪಡೆಯಬಹುದು.
3. ಸದಸ್ಯರು, ಸರ್ವ ಸದಸ್ಯರ ಸಭೆಯಲ್ಲಿ ಚರ್ಚಿಸಬೇಕಾದ ಇತರ ವಿಷಯ ಗಳೇನಾದರೂ ಇದ್ದಲ್ಲಿ ಸಭೆಯ ದಿನಾಂಕಕ್ಕೆ 10 ದಿನ ಮುಂಚಿತವಾಗಿ ಲಿಖಿತ ಮೂಲಕ ಸಂಘದ ಕಾರ್ಯಾಲಯಕ್ಕೆ ತಲುಪಿಸಬೇಕಾಗಿ ವಿನಂತಿ. ನಂತರ ಬಂದ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಲು ಅವಕಾಶ ವಿರುವುದಿಲ್ಲ.
4. ಸಭೆಯ ಪ್ರವೇಶ ಮತ್ತು ಮತ ಚಲಾಯಿಸುವ ಅಧಿಕಾರ ಸಂಘದ ಸದಸ್ಯರುಗಳಿಗೆ ಮಾತ್ರ ಸೀಮಿತ.

## ವಿಶೇಷ ಸೂಚನೆ :

ಯಾವುದೇ ಕಾರಣದಿಂದ ಸರ್ವ ಸದಸ್ಯರ ಸಭೆಯು 12-00 ಘಂಟೆಗೆ ಕೋರಂ ಇಲ್ಲದಿದ್ದ ಪಕ್ಷದಲ್ಲಿ ಸಭೆಯನ್ನು ಮುಂದೂಡಲಾಗುತ್ತದೆ ಮತ್ತು 12.30 ಘಂಟೆಗೆ ಅದೇ ಸ್ಥಳದಲ್ಲಿ ಮುಂದೂಡಲಾದ ಸರ್ವ ಸದಸ್ಯರ ಸಭೆಯನ್ನು ನಡೆಸಲಾಗುತ್ತದೆ.

## ಚುನಾವಣೆ ನೋಟಿಸ್

ಮುಲಕನಾಡು ಮಹಾಸಂಘದ 15 ಮಂದಿ ಆಡಳಿತ ಮಂಡಳಿ ಸದಸ್ಯರ ಸ್ಥಾನಕ್ಕೆ ಚುನಾವಣೆಯನ್ನು ಭಾನುವಾರ ತಾ|| 06-09-2015 ರಂದು ಮಧ್ಯಾಹ್ನ 2.30 ರಿಂದ 4.00 ಘಂಟೆವರೆಗೆ "ಗೀರ್ವಾಣ ವಿದ್ಯಾಭವನ"ದಲ್ಲಿ ಸರ್ವಸದಸ್ಯರ ಸಭೆಯಲ್ಲಿ ನಡೆಸಲಾಗುವುದು. ಎಲ್ಲಾ ಸದಸ್ಯರು ಬಂದು ಭಾಗವಹಿಸಿ ಚುನಾವಣೆಯು ಸುಸೂತ್ರವಾಗಿ ನಡೆಯುವಂತೆ ಸಹಕರಿಸಬೇಕಾಗಿ ವಿನಂತಿ.

1. ನಾಮಪತ್ರ "ಗೀರ್ವಾಣ ವಿದ್ಯಾಭವನ" ಕಛೇರಿಯಲ್ಲಿ ಪಡೆಯಲು ಕಡೆಯ ದಿನಾಂಕ 22-08-2015 (ಕೆಲಸದ ವೇಳೆ ಭಾನುವಾರ ಹೊರತು ಬೆಳಿಗ್ಗೆ 9.30 ರಿಂದ 11.00 ಘಂಟೆ ಮತ್ತು ಸಂಜೆ 4.30 ರಿಂದ 6.00 ಘಂಟೆಯವರೆಗೆ)
2. ನಾಮಪತ್ರ ಸಲ್ಲಿಸಲು ಕಡೆಯ ದಿನಾಂಕ 27-08-2015 (ಸಂಜೆ 6.00 ಘಂಟೆಯವರೆಗೆ)
3. ನಾಮಪತ್ರ ಪರಿಶೀಲನೆ ಮತ್ತು ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ: 28-08-2015 (ಸಂಜೆ 6.00 ಘಂಟೆಯವರೆಗೆ)
4. ನಾಮಪತ್ರ ಹಿಂತೆಗೆದುಕೊಳ್ಳಲು ಕಡೆಯ ದಿನಾಂಕ 31-08-2015 (ಸಂಜೆ 5.00 ಘಂಟೆಯವರೆಗೆ)
5. ಅರ್ಹ ಉಮೇದುವಾರರ ಅಂತಿಮ ಪಟ್ಟಿ ಪ್ರಕಟಣೆ 31-08-2015 (ಸಂಜೆ 6.00 ಘಂಟೆಯ ನಂತರ)
6. ಅಗತ್ಯ ಬಿದ್ದಲ್ಲಿ ಚುನಾವಣೆ ದಿನಾಂಕ ಮತ್ತು ಸಮಯ 06-09-2015 ಮಧ್ಯಾಹ್ನ 2.30 ರಿಂದ 4.00 ಘಂಟೆಯವರೆಗೆ ಮತಗಳ ಎಣಿಕೆ ಮತ್ತು ಫಲಿತಾಂಶ ಪ್ರಕಟಣೆ 06-09-2015.